ಈ) ಕಾಲಾವಧಿ ಮೀರಿದ ಔಷಧಿಗಳನ್ನು ಬಳಸಲಾಗದಿರುವುದರಿಂದ ಸರ್ಕಾರಕ್ಕೆ ಆಗುತ್ತಿರುವ ನಷ್ಟವೆಷ್ಟು: (ಜಿಲ್ಲಾವಾರು ಮಾಹಿತಿ ಒದಗಿಸುವುದು):

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಹೌದು.

ಆ) ಬೆಂಗಳೂರು (ಗ್ರಾ) ಜಿಲ್ಲೆಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿಯಿಂದ ಸರ್ಕಾರವು ಸರಬರಾಜು ಮಾಡಿದ ಔಷಧಿಗಳನ್ನು ಆಸ್ಪತ್ರೆಗಳಿಗೆ ವಿತರಿಸುವುದು ಬಾಕಿ ಇರುತ್ತದೆ. ಔಷಧಿ ವಿತರಿಸಲು ಬಾಕಿ ಇದ್ದ ಆಸ್ಪತ್ರೆಗಳಿಗೆ ಔಷಧಿ ಸರಬರಾಜು ಮಾಡಲು ಈಗಾಗಲೇ ಕ್ರಮ ಕೈಗೊಂಡಿದ್ದು, ಸಂಬಂಧಪಟ್ಟ ಆಸ್ಪತ್ರೆಗಳಿಗೆ ಔಷಧಿ ವಿತರಿಸಲು ದಿನಾಂಕ ನಿಗದಿಪಡಿಸಿದೆ.

ಇ) ಔಷಧಿ ವಿತರಿಸದೇ ಕಾಲಾವಧಿ ಮಿರಿದ ಪ್ರಕರಣ ಗಮನಕ್ಕೆ ಬಂದಿದೆ– ಕೋಲಾರ ಜಿಲ್ಲೆಯ ಸಾರ್ವಜನಿಕ ಆಸ್ಪತ್ರೆ, ಗೌರಿಬಿದನೂರು ಹಾಗೂ ಕೆ.ಎನ್.ಟಿ.ಬಿ. ಆಸ್ಪತ್ರೆಯಲ್ಲಿ ರೋಗಿಗಳ ಚಿಕಿತ್ಸೆಗೆ ಬಳಸದೆ ಕೆಲವು ಔಷಧಿಗಳ ಕಾಲಾವಧಿ ಮೀರಿರುತ್ತದೆ. ಗೌರಿಬಿದನೂರು ಆಸ್ಪತ್ರೆಯ ವೈದ್ಯಧಿಕಾರಿ ಮತ್ತು ಸಂಬಂಧಿಸಿದ ಸಿಬ್ಬಂದಿಯನ್ನು ಅಮಾನತ್ತುಗೊಳಿಸಿ ಶಿಸ್ತು ಕ್ರಮ ಕೈಗೊಳ್ಳಲಾಗಿದೆ. ಕೆ.ಎನ್.ಟಿ.ಬಿ. ಆಸ್ಪತ್ರೆಯಲ್ಲಿ ಬಳಸದೆ ಕಾಲಾವಧಿ ಮೀರಿದ ಔಷಧಿಯ ಮೊತ್ತನ್ನು ಸಂಬಂಧಿಸಿದವರಿಂದ ವಸೂಲು ಮಾಡಿ ಸರ್ಕಾರಕ್ಕೆ ತುಂಬಲಾಗಿದೆ.

ಈ) ಕಾಲಾವಧಿ ಮೀರಿದ ಔಷಧಿಗಳನ್ನು ಬಳಸಲಾಗದಿರುವುದರಿಂದ ಕೋಲಾರ ಜಿಲ್ಲೆಯಲ್ಲಿ ಸರ್ಕಾರಕ್ಕೆ ಆದ ನಷ್ಟ ರೂ. 5,258–00 ಉಳಿದ ಜಿಲ್ಲೆಗಳಲ್ಲಿ ಇಂತಹ ಪ್ರಕರಣ ಗಮನಕ್ಕೆ ಬಂದಿಲ್ಲ.

ಹುಣಸೂರು ಪಟ್ಟಣದಲ್ಲಿರುವ ಸಾರ್ವಜನಿಕ ಆಸ್ಪತ್ರೆಯಲ್ಲಿ ದಾದಿಯರ ಕೊರತೆ

4110 (4722) : ಶ್ರೀ ಪಾಪಣ್ಣ ವಿ. (ಹೂಣಸೂರು) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹುಣಸೂರು ಪಟ್ಟಣದಲ್ಲಿರುವ ಸಾರ್ವಜನಿಕ ಆಸ್ಪತ್ರೆಯಲ್ಲಿ ದಿನನಿತ್ಯ 500 ಕ್ಕೂ ಮಿಗಿಲಾಗಿ ಹೊರರೋಗಿಗಳು ಬರುವುದು ನಿಜವಲ್ಲವೆ:-

ಆ) ಈ ಸಾರ್ವಜನಿಕ ಆಸ್ಪತ್ರೆಯಲ್ಲಿ 24 ದಾದಿಯರು ಇರಬೇಕಾಗಿದ್ದು, ಕೇವಲ ನಾಲ್ಕು ದಾದಿಯರಿರುವುದರಿಂದ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಇ) ಬಂದಿದ್ದಲ್ಲಿ ಕೂಡಲೇ ದಾದಿಯರನ್ನು ನೇಮಕ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟಂಬ ಕಲ್ಯಾಣ ಸಚಿವರು)

ಅ) ನಿಜ.

ಆ) ಬಂದಿದೆ.

ಹುಣಸೂರು ಸಾರ್ವಜನಿಕ ಆಸ್ಪತ್ರೆಯಲ್ಲಿ 15 ದಾದಿಯರ ಹುದ್ದೆ ಮಂಜೂರಾಗಿದ್ದು 13 ದಾದಿಯರು ಕರ್ತವ್ಯ ನಿರ್ವಹಿಸುತ್ತಿದ್ದಾರೆ, 2 ದಾದಿಯರ ಹುದ್ದೆ ಖಾಲಿ ಇರುವುದು.

ಇ) ಬ್ಯಾಕ್‌ಲಾಗ್ ಹುದ್ದೆಗಳ ನೇಮಕಾತಿ ಕಾರ್ಯ ಮುಗಿದಿದ್ದು, ಸಿಂಧುತ್ವ ಪ್ರಮಾಣ ಪತ್ರ ಮತ್ತು ಪೋಲೀಸ್ ವರದಿ ಬಂದ ಕೂಡಲೇ ಖಾಲಿ ಇರುವ ದಾದಿಯರ ಹುದ್ದೆಯನ್ನು ನೇಮಕ ಮಾಡಲಾಗುವುದು.